ಶ್ರೀ ವಾಟಾಳ್ ನಾಗರಾಜ್.—ವಿದ್ಯುಚ್ಛಕ್ತಿ ಮಂಡಲಿಗೆ ಹೋಗಿ ತಿಳಿದುಕೊಂಡು ಬಂದಿದ್ದೇನೆ. ಅವರು ಸರ್ಕಾರಕ್ಕೆ ಕಳುಹಿಸಿದ್ದಾರೆ.

ಅಧ್ಯಕ್ಷರು.—ಇದಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈಗ ವಿದ್ಯುಚ್ಛಕ್ತಿ ದರ ಏರಿಸಿದರೆ ಗದ್ದಲವಾಗುತ್ತದೆ, ಅಧಿವೇಶನ ಮುಗಿದ ನಂತರ ಏರಿಸೋಣವೆಂದು ತೀರ್ಮಾನ ಮಾಡಿದ್ದಾರೆ.

ಅಧ್ಯಕ್ಷರು.—ನಾನು ಹೇಳುತ್ತೇನೆ, ದಯವಮಾಡಿ ತಾವು ಕುಳಿತುಕೊಳ್ಳಬೇಕು. ೨೯ನೇ ತಾರೀಖಿನೊಳಗೆ ಈ ಸದನ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯನಿರ್ವಹಣೆ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು ಇದೆ. ಈ ಎಲ್ಲಾ ವಿಚಾರಗಳನ್ನು ಆಗ ತಾವು ಪ್ರಸ್ತಾಪ ಮಾಡಬಹುದು. ಆದ್ದರಿಂದ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅಧ್ಯಕ್ಷರೆ, ನಾನು ಇಷ್ಟೇ ಹೇಳುತ್ತೇನೆ. ಈ ಪವರ್ ಬಗ್ಗೆ ನಾವು ಡಿಮ್ಯಾಂಡ್ಸ್ ಮೇಲೆ ಡಿಸ್‌ಕಷನ್ ಮಾಡುತ್ತೇವೆ. ಆದರೆ ಕೆ.ಇ.ಬಿ. ಬಗ್ಗೆ ಸೆಪರೇಟ್ ಆಗಿ ಡಿಸ್‌ಕಷನ್ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಅದರ ಬಗ್ಗೆ ನೋಟೀಸ್ ಕೊಡಿ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಇದು ಬಂದೇ ಬರುತ್ತದೆ. ಇದು ಕರ್ನಾಟಕ ರಾಜ್ಯದ ಜನತೆಗೆ ಮತ್ತೊಂದು ಘೋರ ಅನ್ಯಾಯವಾಗಲಿದೆ. ಅದರ ಜೊತೆಗೆ ನೀರಿನ ದರವನ್ನೂ ಸಹ ಏರಿಸುತ್ತಾರೆ. ಇದರ ಬಗ್ಗೆ ಸರ್ಕಾರ ತೀರ್ಮಾನ ಮಾಡಿದೆ.

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ, ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಗಮನ ಸೆಳೆಯುವ ಸೂಚನೆ

ಗುಲ್ಬರ್ಗ ಜಿಲ್ಲೆಯಲ್ಲಿ ರೈತರಿಗೆ ಈವರೆವಿಗೂ ಬಿತ್ತನೆ ಬೀಜ ಮತ್ತು ಗೊಬ್ಬರ ದೊರಕದೆ ತೊಂದರೆ ಉಂಟಾಗಿರುವುದು

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ.—ಅಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯಲ್ಲಿ ರೈತರು ಬಿತ್ತನೆ ಕಾರ್ಯ ಪ್ರಾರಂಭಿಸಿದ್ದರೂ ಅವರಿಗೆ ಈವರೆಗೂ ಬಿತ್ತನೆ ಬೀಜ, ಗೊಬ್ಬರ ಇತ್ಯಾದಿ ಸರಬರಾಜು ಆಗದಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿಯವರು ಕೇಳಿರತಕ್ಕಂಥ ಗಮನ ಸೆಳೆಯುವ ಸೂಚನೆಗೆ ಈ ಉತ್ತರವನ್ನು ಹೇಳುತ್ತಿದ್ದೇನೆ.

೧೯೯೦ರ ಮುಂಗಾರು ಹಂಗಾಮಿಗೆ ರಾಜ್ಯದ ಪ್ರಮಾಣಕ ಬಿತ್ತನೆ ಬೀಜದ ಬೇಡಿಕೆ ೨.೭೮ ಲಕ್ಷ ಕ್ವಿಂಟಾಲಾಗಿರುತ್ತದೆ. ಗುಲ್ಬರ್ಗಾ ಜಿಲ್ಲೆಗೆ ಒಟ್ಟು ೨೨,೯೩೦ ಕ್ವಿಂಟಾಲ್ ವಿವಿಧ ಬೆಳೆಗಳ ಬೀಜಗಳ ಬೇಡಿಕೆಯಿದ್ದು, ಇದು ಳ,೫೮೬ ಕ್ವಿಂಟಾಲ್ ಏಕದಳ, ೮೬೨೦ ಕ್ವಿಂಟಾಲ್ ದ್ವಿದಳ ಧಾನ್ಯ, ೯,೫೮೩ ಕ್ವಿಂಟಾಲ್ ಎಣ್ಣೆಕಾಳು ಮತ್ತು ೧೪೨೨ ಕ್ವಿಂಟಾಲ್ ಹತ್ತಿ ಬೀಜಗಳ ಬೇಡಿಕೆಯೊಳಗೊಂಡಿರುತ್ತದೆ. ಈ ಬೇಡಿಕೆಯನ್ನು ಪೂರೈಸಲು ವಿತರಣಾ ಸಂಸ್ಥೆಗಳಾದ ಕರ್ನಾಟಕ ರಾಜ್ಯ ಬೀಜ ನಿಗಮದ ಮುಖಾಂತರ ೫೯೦ ಕ್ವಿಂಟಾಲ್ ಏಕದಳ, ೧೬೭೦ ಕ್ವಿಂಟಾಲ್ ದ್ವಿದಳ ಧಾನ್ಯ ೨೯೫ ಕ್ವಿಂಟಾಲ್ ಎಣ್ಣೆಕಾಳು ಹಾಗೂ ರಾಷ್ಟ್ರೀಯ ಬೀಜ ನಿಗಮದ ಮುಖಾಂತರ ೧೪೫ ಕ್ವಿಂಟಾಲ್ ಏಕದಳ ಮತ್ತು ೪೦ ಕ್ವಿಂಟಾಲ್ ಎಣ್ಣೆಕಾಳು ಬೀಜಗಳನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ. ಇದೇ ರೀತಿ ಕರ್ನಾಟಕ ರಾಜ್ಯ ಎಣ್ಣೆಕಾಳು ಮಹಾ ಮಂಡಲಿಯು ೬೨೦ ಕ್ವಿಂಟಾಲ್ ಎಣ್ಣೆಕಾಳು ಬೀಜಗಳನ್ನು ಸರಬರಾಜು ಮಾಡುವ ವ್ಯವಸ್ಥೆಯಿದೆ. ಖಾಸಗಿ ಮತ್ತು ಸರ್ಕಾರಿ ಕ್ಷೇತ್ರಗಳ ಮೂಲಕ ಒಟ್ಟಾರೆ ೪೫೭೦ ಕ್ವಿಂಟಾಲ್ ಏಕದಳ ಧಾನ್ಯ, ೧೩೦ ಕ್ವಿಂಟಾಲ್ ದ್ವಿದಳ ಧಾನ್ಯ ಮತ್ತು ೨೧೦ ಕ್ವಿಂಟಾಲ್ ಎಣ್ಣೆಕಾಳು ಬೀಜಗಳನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ. ಹತ್ತಿ ಬೀಜದ ಬಗ್ಗೆ ಹೇಳುವುದಾದರೆ ಖಾಸಗಿ ವ್ಯಾಪಾರಿಗಾರರು ಮತ್ತು ಕರ್ನಾಟಕ ರಾಜ್ಯ ಬೀಜ ನಿಗಮದವರ ಮೂಲಕ ೮೫ ಕ್ವಿಂಟಾಲ್ ಸಂಕರ (ಹೈಬ್ರಿಡ್) ಹತ್ತಿಬೀಜವನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗಿದೆ ಅದಾಗ್ಯೂ ತೊಗರಿ, ಉದ್ದು, ಹಾಗೂ ಸೂರ್ಯಕಾಂತಿ ಬಿತ್ತನೆ ಬೀಜದ ಕೊರತೆ ಸ್ವಲ್ಪಮಟ್ಟಿಗೆ ಕಂಡು ಬಂದಿದ್ದು, ಈ ಬೇಡಿಕೆಯನ್ನು

ಪೂರೈಸಲು ರೈತರಲ್ಲಿ ದೊರೆಯುವ ಗುಣಮಟ್ಟದ ಬೀಜಗಳನ್ನು ಗುರುತಿಸಿ ಸಹಕಾರ ಸಂಸ್ಥೆಗಳ ಮೂಲಕ ಮತ್ತು ರೈತರಿಂದ ರೈತರಿಗೆ ಬದಲಿ ವ್ಯವಸ್ಥೆಯ ಮುಖಾಂತರ ಒದಗಿಸಲು ವ್ಯವಸ್ಥೆ ಮಾಡಲಾಗಿದೆ. ಸದ್ಯ ಗುಲ್ಬರ್ಗಾ ಜಿಲ್ಲೆಯಲ್ಲಿ ೫೨೯ ಕ್ವಿಂಟಾಲ್ ಸಜ್ಜಿ, ೫೦೮ ಕ್ವಿಂಟಾಲ್ ಭತ್ತ, ೧೦೦ ಕ್ವಿಂಟಾಲ್ ಸಂಕರ ಜೋಳ, ೨೯ ಕ್ವಿಂಟಾಲ್ ಮುಸಕಿನ ಜೋಳ, ೪೫೦ ಕ್ವಿಂಟಾಲ್ ತೊಗರಿ, ೩೧೮ ಕ್ವಿಂಟಾಲ್ ಹೆಸರು, ೧೩೩ ಕ್ವಿಂಟಾಲ್ ಸೂರ್ಯಕಾಂತಿ, ೧೦೦೦ ಕ್ವಿಂಟಾಲ್ ನೆಲಗಡಲೆ, ೧೦ ಕ್ವಿಂಟಾಲ್ ಎಳ್ಳು ಮತ್ತು ೬೪ ಕ್ವಿಂಟಾಲ್ ಸಂಕರ (ಹೈಬ್ರಿಡ್) ಹತ್ತಿ ಬೀಜದ ದಾಸ್ತಾನ್ನು ಇರುತ್ತದೆ. ದಾಸ್ತಾನು ಮಾಡಿರುವ ಬೀಜಗಳು ಮಾರಾಟವಾದಂತೆ ಬೇಡಿಕೆ ಆಧಾರದ ಮೇಲೆ ವಿವಿಧ ಸಂಸ್ಥೆಗಳ ಮೂಲಕ ಬೇಡಿಕೆಯನ್ನು ಈಡೇರಿಸುವ ವ್ಯವಸ್ಥೆಯನ್ನೂ ಸಹ ಮಾಡಲಾಗಿದೆ.

ಗುಲ್ಬರ್ಗಾ ಜಿಲ್ಲೆಗೆ ಮುಂಗಾರು ಹಂಗಾಮಿಗೆ ಸುಮಾರು ೨೩,೪೨೫ ಟನ್ ರಸಗೊಬ್ಬರಗಳ ಅವಶ್ಯಕತೆಯಿದ್ದು ಇದರಲ್ಲಿ ೫೭೫೫ ಟನ್ ಯೂರಿಯಾ ೧೦೦೦೦ ಟನ್ ಡಿ. ಎ. ಪಿ. ೫೭೦೦ ಟನ್ ಕಾಂಪ್ಲೆಕ್ಸ್‌ಗಳು, ೪೫೦ ಟನ್ ಸೂಪರ್ ಫಾಸ್ಪೇಟ್ ಮತ್ತು ೧೫೫೦ ಟನ್ ಮ್ಯೂರಿಯೇಟ್ ಆಫ್ ಪೊಟ್ಯಾಷ್ ಒಳಗೊಂಡಿರುತ್ತದೆ. ಜೂನ್ ಅಂತ್ಯದವರೆಗೆ ಒಟ್ಟು ಅವಶ್ಯಕತೆಯ ಶೇಕಡ ೪೦ರಷ್ಟು ರಸಗೊಬ್ಬರ ಬೇಕಾಗಿರುತ್ತದೆ. ಈಗ ಗುಲ್ಬರ್ಗಾ ಜಿಲ್ಲೆಯಲ್ಲಿ ಕರ್ನಾಟಕ ಕೃಷಿ ಕೈಗಾರಿಕಾ ನಿಗಮ, ರಾಜ್ಯ ಸಹಕಾರ ಮಾರಾಟ ಮಂಡಳಿ ಮತ್ತು ಖಾಸಗಿ ಮಾರಾಟಗಾರರಲ್ಲಿ ೨೦೨೭ ಟನ್ ಯೂರಿಯಾ, ೬೫೬೭ ಟನ್ ಡಿ.ಎ.ಪಿ, ೧೮೮೭ ಟನ್ ಕಾಂಪೆಕ್ಸ್‌ಗಳು ೧೫೦ ಟನ್ ಸೂಪರ್ ಫಾಸ್ಪೇಟ್ ಮತ್ತು ೧೭೦೦ ಟನ್ ಮ್ಯೂರಿಯೇಟ್ ಆಫ್ ಪೊಟ್ಯಾಷ್ ದಾಸ್ತಾನು ಇರುತ್ತದೆ. ೧೯೯೦ ಮುಂಗಾರು ಹಂಗಾಮಿಗೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ಈಗಾಗಲೇ ಸಾಕಷ್ಟು ರಸಗೊಬ್ಬರವನ್ನು ಹಂಚಿಕೆ ಮಾಡಿರುವುದರಿಂದ ಗುಲ್ಬರ್ಗಾ ಜಿಲ್ಲೆಗೆ ಬೇಕಾಗುವ ರಸಗೊಬ್ಬರಗಳನ್ನು ಸಕಾಲದಲ್ಲಿ ಸರಬರಾಜು ಮಾಡಲಂ ವ್ಯವಸ್ಥೆ ಮಾಡಲಾಗಿದೆ.

ಈಗ ತಾನೇ ಬಿತ್ತನೆ ಪ್ರಾರಂಭವಾಗಿದ್ದು ಸದ್ಯಕ್ಕೆ ಸಸ್ಯ ಸಂರಕ್ಷಣೆ ಕಾರ್ಯಕ್ರಮಗಳನ್ನು ಕೈಗೊಳ್ಳುವ ಪ್ರಮೇಯ ಉದ್ಭವಿಸುವುದಿಲ್ಲ. ಆದಕ್ಕೂ ಸಹ ಜಿಲ್ಲೆಯಲ್ಲಿ ಈಗಾಗಲೇ ಸದ್ಯಕ್ಕೆ ಬೇಕಾಗುವ ಕೀಟನಾಶಕಗಳನ್ನು ಕರ್ನಾಟಕ ರಾಜ್ಯ ಕೃಷಿ ಕೈಗಾರಿಕಾ ನಿಗಮ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಹಾಗೂ ಖಾಸಗಿ ಮಾರಾಟಗಾರರಲ್ಲಿ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಮಾಡಲಾಗಿದೆ.

ಸದ್ಯ ಕೃಷಿ ಇಲಾಖೆಯ ಅಧಿಕಾರಿಗಳು ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಔಷಧಗಳ ಪರಿವೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವರು. ರೈತರಿಗೆ ಗುಣಮಟ್ಟದ ಕೃಷಿ ಸಾಮಗ್ರಿಗಳನ್ನು ಒದಗಿಸಲು ಮತ್ತೂ ಅನುಕೂಲವಾಗುವಂತೆ ಇತರೆ ಇಲಾಖೆಗಳ ಅಧಿಕಾರಿಗಳನ್ನು ಸಹ ಬೀಜ, ರಸಗೊಬ್ಬರ ಮತ್ತು ಕೀಟನಾಷಕ ಔಷಧಿಗಳ ಪರಿವೀಕ್ಷಕರನ್ನಾಗಿ ನೇಮಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಬಸವಂತ ರೆಡ್ಡಿ ವೋತಕಪಲ್ಲಿ —ಸರಕಾರದ ವತಿಯಿಂದ ಸಾವಿರಾರು ಚೀಲ ಬಿತ್ತನೆ ಬೀಜಗಳನ್ನು ಕಳಿಸಿರಬಹುದು. ಆದರೆ ನಮ್ಮ ಗುಲ್ಬರ್ಗ ಜಿಲ್ಲೆಗೆ ಇಲ್ಲಿಯವರೆಗೆ ಬಿತ್ತನೆ ಬೀಜಗಳನ್ನು ಕಳಿಸಿಲ್ಲವೆಂದು ನಾನು ಕೇಳಿದ್ದೇನೆ. ದಿನಾಂಕ ೩-೬-೯೦ರಂದು ನಾನು ನನ್ನ ಕ್ಷೇತ್ರಕ್ಕೆ ಹೋದಾಗ ರೈತರಿಗೆ ಬಿತ್ತನೆ ಬೀಜ ಸಿಕ್ಕಿಲ್ಲವೆಂದು ತಿಳಿಯಿತು. ದಿನಾಂಕ ೧-೬-೯೦ರಂದು ಬೀಜವನ್ನು ತರಲು ಬೀಜೋತ್ಪಾದನಾ ಕೇಂದ್ರವಾದ ಕೋಟನೂರಿಗೆ ಕಳಿಸಿದರೆ ದಿನಾಂಕ ೫-೬-೯೦ರಂದು ಬರಲು ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅವರಿಗೂ ನನಗೂ ಮಧ್ಯೆ ಕೆಲವು ಸದಸ್ಯರು ನಿಂತಿದ್ದಾರೆ. ಇದು ನನಗೂ ಅವರಿಗೂ ಮಧ್ಯೆ ಗೋಡೆಯಾಯಿತು. ಪಾರ್ಲಿಮೆಂಟರಿ ಸೂಕ್ಷ್ಮತೆಗಳನ್ನು ಮಾನ್ಯ ಸದಸ್ಯರು ಗಮನಿಸಿದರೆ ಮಹದುಪಕಾರವನ್ನು ಮಾಡಿದಂತಾಗುತ್ತದೆ.

ಶ್ರೀ ಬಸವಂತ ರೆಡ್ಡಿ ವೋತಕಪಲ್ಲಿ.—ರೋಹಿಣಿ ಮೃಗಶಿರಾ ನಕ್ಷತ್ರಗಳಲ್ಲಿ ಮಳೆ ಬೀಳುತ್ತದೆ. ಆ ಕಾಲಕ್ಕೆ ತಕ್ಕಂತೆ ನಾವು ಬೀಜವನ್ನು ಬಿತ್ತಬೇಕಾಗುತ್ತದೆ ಸಕಾಲದಲ್ಲಿ ಬೀಜವನ್ನು ಬಿತ್ತದಿದ್ದರೆ ಉತ್ಪಾದನೆಯಲ್ಲಿ ಏರುಪೇರಾಗುತ್ತದೆ. ಕೃಷಿ ಇಲಾಖೆಯ ವತಿಯಿಂದ ಸಾವಿರಾರು ಚೀಲ ಬೀಜಗಳನ್ನು ಬಡ್ತಿಗಡೆ ಮಾಡಿರಬಹುದು, ಆದರೆ ನಮ್ಮ ಜಿಲ್ಲೆಯ ರೈತರಿಗೆ ಅದು ಸಿಕ್ಕಿಲ್ಲ. ಗುಲ್ಬರ್ಗ ಜಿಲ್ಲೆಯಲ್ಲಿ ಬಹುತೇಕ ಕಡೆಗಳಲ್ಲಿನ ಬಂಜರು ಭೂಮಿಯಲ್ಲಿ ಎಕರೆ ಭೂಮಿಯಲ್ಲಿ ಇನ್ನಿತರ ಕಡೆಗಳಲ್ಲಿ ಬಿತ್ತಿಕೆ

ಯನ್ನು ಪ್ರಾರಂಭ ಮಾಡಿದ್ದಾರೆ. ಮಸೂರಿ ಭೂಮಿಯಲ್ಲಿ ಬಿತ್ತಳಿಕೆ ಕಾರ್ಯ ಮುಗಿದಿದೆ. ಎರೆ ಭೂಮಿಯಲ್ಲಿ ಬಿತ್ತಳಿಕೆ ಕಾರ್ಯ ಅರ್ಧ ಮುಗಿದಿದೆ ಆದರೂ ಕೂಡ ರೈತರಿಗೆ ಪೂರ್ಣ ಪ್ರಮಾಣದ ಬೀಜ ದೊರೆತಿಲ್ಲ ಅಲ್ಲದೆ ತೆಲಂಗಾಣ ಗಡಿ ಪ್ರಾಂತ್ಯದಲ್ಲಿ ಬಿತ್ತಳಿಕೆ ಕಾರ್ಯ ಮುಗಿದಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ಏನು ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಇದು ಬಿತ್ತನೆಕಾಲವಾದ್ದರಿಂದ ರೈತರಿಗೆ ಮುಖ್ಯವಾಗಿ ಬಿತ್ತನೆ ಬೀಜದ ಆವಶ್ಯಕತೆ ಇದೆ. ಆದರೆ ಮಾನ್ಯ ಸದಸ್ಯರು ಯಾವ ಬೀಜದ ಕೊರತೆ ಇದೆ, ಯಾವ ಬೀಜ ರೈತರಿಗೆ ಸಿಕ್ಕಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲ. ಅವರು ಗುಲ್ಬರ್ಗಾ ಜಿಲ್ಲೆಗೆ ಮಾತ್ರ ಸಂಬಂಧಪಟ್ಟಂತೆ ಇಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದೇ ರೀತಿಯ ಬೀಜದ ಕೊರತೆ ನಮ್ಮ ರಾಜ್ಯದ ಇನ್ನೂ ಅನೇಕ ಜಿಲ್ಲೆಗಳಲ್ಲಿದೆ. ಇದು ನನಗೆ ಗೊತ್ತಿದೆ. ಆದರೆ ನಾನು ಹೊಸದಾಗಿ ಈ ಇಲಾಖೆಯನ್ನು ವಹಿಸಿಕೊಂಡಿರುವುದರಿಂದ ಮಾನ್ಯ ಸದಸ್ಯರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಯಾವ ಯಾವ ಬಿತ್ತನೆ ಬೀಜದ ಕೊರತೆ ಇದೆ ಎಂಬುದನ್ನು ನನಗೆ ತಿಳಿಸಿದರೆ, ಖಂಡಿತವಾಗಿಯೂ ಅದನ್ನು ಸರಬರಾಜು ಮಾಡಿಸಲು ಕ್ರಮ ಕೈಗೊಳ್ಳುತ್ತೇನೆ. ಕೃಷಿ ಇಲಾಖೆಯ ಮುಖಾಂತರ ಈ ಬೀಜಗಳನ್ನು ಒದಗಿಸುವ ಜವಾಬ್ದಾರಿ ನನ್ನದಾಗಿದೆ. ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ಬಿತ್ತನೆ ಬೀಜ, ಫಸಲು ಸಂರಕ್ಷಣೆಗೆ ಅವಶ್ಯಕವಾಗಿ ಬೇಕಾದ ಔಷಧಿಗಳನ್ನು ಒದಗಿಸಬೇಕಾದ ಜವಾಬ್ದಾರಿ ನನ್ನದಾಗಿದೆ. ಮಾನ್ಯ ಬಸವಂತ ರೆಡ್ಡಿ ಮೋತಕಪಲ್ಲಿಯವರು ಮಾತ್ರ ಅವರ ಗುಲ್ಬರ್ಗಾ ಜಿಲ್ಲೆಗೆ ಸಂಬಂಧಿಸಿದಂತೆ ಈ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ಬೇರೆ ಮಾನ್ಯ ಸದಸ್ಯರು ಅವರವರ ಜಿಲ್ಲೆಯಲ್ಲಿ ಯಾವ ಯಾವ ಬೀಜದ ಕೊರತೆ ಇದೆ ಎಂಬುದನ್ನು ಕೇಳಿಲ್ಲ. ಆದರೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಿತ್ತನೆ ಬೀಜಗಳ ಕೊರತೆ ಇದೆ. ಇದಂ ಕೇವಲ ಇವತ್ತಿನಿಂದ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಹತ್ತಿ ಬಿತ್ತನೆ ಬೀಜ. ಹತ್ತಿ ಬಿತ್ತನೆ ಬೀಜದ ಪ್ರಮಾಣವನ್ನು ಜಾಸ್ತಿ ಮಾಡಲು ಆಗ್ರಿಕಲ್ಚರ್ ಯೂನಿವರ್ಸಿಟಿ ಮುಖಾಂತರ ಪ್ರಯತ್ನ ಮಾಡುತ್ತಿದ್ದೇವೆ ಅಷ್ಟೇ ಅಲ್ಲ, ಇಲಾಖೆಯ ಮುಖಾಂತರವೂ ಕೂಡ ಪ್ರಯತ್ನ ಮಾಡುತ್ತಿದ್ದೇವೆ. ಹತ್ತಿ ಬೀಜದ ಕೊರತೆ ಅವರಲ್ಲಿದೆ. ಆದರೆ ಅವರು ಅದನ್ನು ಸ್ಪಷ್ಟವಾಗಿ ಕೇಳಿಲ್ಲ. ಆದರೂ ಇದಂ ನನಗೆ ಗೊತ್ತಿದೆ. ಅವರು ಇದೇ ತಿಂಗಳು ಹನ್ನೆರಡನೇ ತಾರೀಖು ಹೋದಾಗ ರೈತರಿಗೆ ಬಿತ್ತನೆ ಬೀಜ ಸಿಕ್ಕಿಲ್ಲಿ ಎನ್ನುತಕ್ಕ ವಿಚಾರವನ್ನು ಹೇಳಿದ್ದಾರೆ. ಅವರಿಗೆ ಯಾವ ಬಿತ್ತನೆ ಬೀಜದ ಅವಶ್ಯಕತೆ ಇತ್ತು ಎಂಬುದನ್ನು ಹೇಳಿಲ್ಲದಿದ್ದರೂ ಸಾಧ್ಯವಾದರೆ ಈಗಲಾದರೂ ಹೇಳಲಿ. ಇಲ್ಲದಿದ್ದರೆ ನನ್ನನ್ನು ಅನಂತರ ಬಂದು ಭೇಟಿ ಮಾಡಿಯಾದರೂ ಹೇಳಲಿ, ಇಲ್ಲದಿದ್ದರೆ ಪತ್ರವನ್ನು ಬರೆದಾದರೂ ತಿಳಿಸಲಿ. ಆ ಬಗ್ಗೆ ನಾನು ನನ್ನ ಶಕ್ತಿಮೀರಿ ಪ್ರಯತ್ನಿಸಿ, ಅವರಿಗೆ ಬೇಕಾದ ಬಿತ್ತನೆ ಬೀಜವನ್ನು ಸರಬರಾಜು ಮಾಡಿಸಲು ಕ್ರಮ ಕೈಗೊಳ್ಳುತ್ತೇನೆ. ಇನ್ನೊಂದು ವಿಚಾರ ಎಂದರೆ, ಕೆಲವು ಬಿತ್ತನೆ ಬೀಜಗಳು ಇನ್ನೂ ದಾಸ್ತಾನು ಮಟ್ಟದಲ್ಲೇ ಇವೆ. There is a certifying agency kept up by our own department ನಮ್ಮ ಇಲಾಖೆಯವರು ಸರ್ಟಿಫೈ ಮಾಡುವುದಕ್ಕೆ ಇಟ್ಟುಕೊಂಡಿದ್ದಾರೆ. ಸರ್ಟಿಫೈ ಆದಕೂಡಲೇ ಆ ಬೀಜಗಳನ್ನು ಕೊಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಆದ್ದರಿಂದ ಮಾನ್ಯ ಸದಸ್ಯರು ಯಾರೇ ಆಗಲಿ, ಅವರವರ ಜಿಲ್ಲೆಗಳಲ್ಲಿ ಅಥವಾ ಆಯಾಯ ಕ್ಷೇತ್ರಗಳಲ್ಲಿ ನಿರ್ದಿಷ್ಟ ಯಾವ ಬಿತ್ತನೆ ಬೀಜಗಳ ಕೊರತೆ ಇದೆ ಎಂಬುದನ್ನು ಸಾಧ್ಯವಾದರೆ ಈಗಲೇ ಹೇಳಬಹುದು. ಇಲ್ಲವೇ ಅನಂತರ ನನ್ನನ್ನು ಭೇಟಿಮಾಡಿ ತಿಳಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಈಗಾಗಲೇ ನಾನು ಹೇಳಿದಂತೆ ಮಾನ್ಯ ಸದಸ್ಯರು ಬಿತ್ತನೆ ಬೀಜಕ್ಕಾಗಿ ಸಂಬಂಧಪಟ್ಟವರ ಹತ್ತಿರ ಹೋದಾಗ ಇನ್ನೊಂದು ದಿವಸ ಬರುವಂತೆ ಹೇಳಿಕಳುಹಿಸಿದ್ದಾರಂತೆ. ನನಗೆ ಈ ವಿಚಾರ ಗೊತ್ತಿಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರು ವಿವರಗಳನ್ನು ಕೊಟ್ಟರೆ ಸಂಬಂಧಪಟ್ಟವರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳಬೇಕೋ ಅದನ್ನು ತಕ್ಷಣ, ಅತಿಶೀಘ್ರವಾಗಿ ತೆಗೆದುಕೊಳ್ಳುತ್ತೇನೆ ಎಂದು ಹೇಳಬಯಸುತ್ತೇನೆ. ಈಗ ರೈತರು ಬಿತ್ತನೆ ಮಾಡುವುದಕ್ಕೆ ಬಹಳ ಸೂಕ್ತವಾದ ಸಮಯವಾದ್ದರಿಂದ ರೈತರಿಗೆ ಬೇಕಾದ ಬಿತ್ತನೆ ಬೀಜ ಇರಬಹುದು, ಕ್ರಿಮಿನಾಶಕ ಔಷಧಿ ಇರಬಹುದು ಅಥವಾ ಇನ್ನಾವುದೇ ಉಪಕರಣಗಳ ಸೌಲಭ್ಯ ಇರಬಹುದು ಅವು ಸಕಾಲದಲ್ಲಿ ರೈತರಿಗೆ ದೊರೆಯದಿದ್ದರೆ, ಮಾನ್ಯ ಸದಸ್ಯರುಗಳು ತಮ್ಮ ಕ್ಷೇತ್ರಗಳಲ್ಲಿನ ಕುಂದುಕೊರತೆಗಳನ್ನು ನನಗೆ ತಿಳಿಸಿದರೆ, ಕೂಡಲೇ ಕ್ರಮ ತೆಗೆದುಕೊಂಡು ನನ್ನ ಶಕ್ತಿಮೀರಿ ಪ್ರಯತ್ನಿಸಿ ಅವುಗಳನ್ನು ಒದಗಿಸಲು ವ್ಯವಸ್ಥೆ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ.—ಮಾನ್ಯ ಅಧ್ಯಕ್ಷರೆ, ನಮ್ಮ ಭಾಗಕ್ಕೆ ಅತಿಮುಖ್ಯವಾಗಿ ಬೇಕಾಗಿರತಕ್ಕದ್ದು ತೊಗರಿ ಮತ್ತು ಹೆಸರು. ಈ ಬಿತ್ತನೆ ಬೀಜಗಳು ನಮ್ಮ ಭಾಗಕ್ಕೆ ಸರಬರಾಜಾಗಿಲ್ಲ ನಾನು ೧೬-೬-೬೦ರಂದು ಬಿತ್ತನೆ ಬೀಜದ ಕೇಂದ್ರಕ್ಕೆ ಹೋಗಿ ಕೇಳಿದಾಗ ೫-೬-೬೦ಕ್ಕೆ ಬನ್ನಿ ಎಂದು ಹೇಳಿದರು. ಕಾಲಕ್ಕೆ ಸರಿಯಾಗಿ ಬಿತ್ತನೆಯಾಗದೆ ಒಂದು ದಿವಸ ತಡವಾದರೂ ಬಾತಕ್ಕ ಫಸಲು ಏರು

ಪೇರಾಗಬೇತ್ತದೆ. ಆದ್ದರಿಂದ, ಇನ್ನು ಮುಂದೆ ಈ ರೀತಿ ತಾತ್ಸಾರ ಭಾವನೆಯನ್ನು ತೋರಿಸತಕ್ಕ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡು ರೈತರಿಗೆ ವ್ಯವಸಾಯಕ್ಕೆ ಅವಶ್ಯಕವಾಗಿ ಬೇಕಾದ ವಸ್ತುಗಳು ಸಕಾಲದಲ್ಲಿ ಸರಬರಾಜಾಗುವಂತೆ ಕ್ರಮ ಕೈಗೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಎಸ್. ಬಂಗಾರಪ್ಪ.—ತೊಗರಿ, ಹೆಸರುಕಾಳುಗಳ ಬಿತ್ತನೆ ಬೀಜದ ಬಗ್ಗೆ ಹೇಳಿದ್ದೀರಿ. ಅದಕ್ಕೆ ನನ್ನ ಅಭಿನಂದನೆಗಳು. ಇದರ ಜೊತೆಗೆ ಉದ್ದಿನ ಕಾಳನ್ನೂ ಸೇರಿಸಿಕೊಳ್ಳಬೇಕು. ನಮ್ಮ ಕರ್ನಾಟಕದಲ್ಲಿ ಇನ್ನೂ ಕೆಲವು ಬಿತ್ತನೆ ಬೀಜಗಳ ಕೊರತೆ ಇದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬೀಜ ಇದೆ, ಇಲ್ಲವೆಂದು ಹೇಳುತ್ತಿಲ್ಲ. ಆದರೆ ಅದರ ಗುಣಮಟ್ಟ ಸರಿಯಿಲ್ಲವೆಂದು ಆದನ್ನು ರಿಲೀಸ್ ಮಾಡಬಾರದೆಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಒಳ್ಳೆಯ ಬೀಜದ ತಳಿಗಳನ್ನು ಕೊಡದಿದ್ದಲ್ಲಿ ಹೆಚ್ಚಿನ ಉತ್ಪಾದನೆಯನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಅಂಥ ಬೀಜಗಳನ್ನು ನಮ್ಮ ರೈತರಿಗೆ ಒದಗಿಸುವುದೂ ಕೂಡ ಒಳ್ಳೆಯದಲ್ಲವೆಂದು ನನ್ನ ಭಾವನೆಯಾಗಿರುತ್ತದೆ. ಒಳ್ಳೆಯ ಬೀಜವನ್ನು ಮಾರಾಟ ಮಾಡುವುದರ ಬಗ್ಗೆ ಮತ್ತು ಅದರ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಹೆಚ್ಚಿನ ಗಮನವನ್ನು ಕೊಡಬೇಕೆಂದು ಸಂಬಂಧಪಟ್ಟವರಿಗೆ ಆದೇಶಿಸಿದ್ದೇನೆ. ಮಾನ್ಯ ಸದಸ್ಯರು ಏನು ಕೆಲವು ಬಿತ್ತನೆ ಬೀಜಗಳ ಹೆಸರು ಹೇಳಿದರು, ತೊಗರಿ ಹೆಸರು. ಜೊತೆಗೆ ಉದ್ದು ಇವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯತಕ್ಕಂಥ ಭಾಗಗಳಲ್ಲಿ ಸರಬರಾಜು ಮಾಡಲು ನಮ್ಮ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಮತ್ತೆ ಬಿತ್ತನೆ ಬೀಜ ಸರಬರಾಜು ಮಾಡುವುದರಲ್ಲಿ ಯಾವ ಅಭಾಸವಾಗದಂತೆ ನೋಡಿ ಕೊಳ್ಳಲು ಶಕ್ತಿ ಮೀರಿ ಪ್ರಯತ್ನ ಮಾಡುವುದಾಗಿಯೂ ಮಾನ್ಯ ಸದಸ್ಯರಲ್ಲಿ ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರು ಹೇಳಿದಂತೆ ಅಧಿಕಾರಿಗಳಲ್ಲಿ ತಪ್ಪಾಗಿದ್ದಲ್ಲಿ ಒಂದುವೇಳೆ ಅಧಿಕಾರಿಗಳು ಆದೇಶವನ್ನು ಕೊಟ್ಟಿರುವಂತೆ ಕೆಲಸ ಮಾಡಿದ್ದರೆ ಆ ಬಗ್ಗೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೂ ಹಿಂದೆ ಬೀಳುವುದಿಲ್ಲವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

MR. SPEAKER.—Mr. M. V. Venkatappa, I have received a letter from the Hon. Minister Mr. Yahya, stating that he is proceeding to Mysore to attend Peace Committee meeting being held today. I am putting up this particular call attention notice to be taken up tomorrow, if you have no objection.

ಅಧ್ಯಕ್ಷರು.—ಈಗ ಷಿಳಿನೇ ನಿಯಮದ ಮೇರೆಗೆ ಚರ್ಚೆ.

(ಮಾನ್ಯ ಸದಸ್ಯರುಗಳಾದ)

ಶ್ರೀ ಟಿ. ಬಿ. ಜಯಚಂದ್ರ, ಶ್ರೀ ಪಿ. ಸಿ. ಸಿದ್ದನಗೌಡ, ಶ್ರೀ ಆರ್. ಡಿ. ಚೌಧರಿ, ಶ್ರೀ ವಿ. ಎಂ. ಇದಿನಬ್ಬ, ಶ್ರೀ ಡಿ. ಬಿ. ಚಂದ್ರೇಗೌಡರವರು ಗೈರು ಹಾಜರಾಗಿದ್ದಾರೆ)

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿ. ಷಿಳಿನೇ ನಿಯಮದ ಮೇರೆಗೆ ವಿಷಯಗಳನ್ನು ಈ ಮನೆಯಲ್ಲಿ ತೆಗೆದುಕೊಳ್ಳಬೇಕಾದರೆ ಮಾನ್ಯ ಸದಸ್ಯರ್ಯಾರಿಗೂ ಇಂಥ ದಿವಸ ಇಂಥ ವಿಷಯವನ್ನು ತೆಗೆದುಕೊಳ್ಳುತ್ತೇವೆಂಬುದಾಗಿ ಇಂಟಿಮೇಷನ್ ಬರುವುದಿಲ್ಲ.

MR. SPEAKER : Intimation is not given, because we should be present here all the time.

ಶ್ರೀ ಎಂ. ವಿ. ವೆಂಕಟಪ್ಪ.—ಮೊದಲು ಎಲ್ಲಾ ವಿವರಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿ ಕೊಡುತ್ತಿದ್ದರು. ಆಜೆಂಡಾ ಕಳುಹಿಸಿಕೊಡುತ್ತಾರೆಂದು ಹೇಳಿದರೆ ಅದನ್ನೂ ಕೂಡ ಕಳುಹಿಸಿಕೊಡಬೇಕಾದ್ದಿಲ್ಲ, ಅದನ್ನು ಬೇಕಾದರೆ ಇಲ್ಲಿಯೇ ಬಂದು ನೋಡಿಕೊಳ್ಳಬಹುದಲ್ಲ. ಇಂಥ ದಿವಸ ಇಂಥ ಸದಸ್ಯರ ಷಿಳಿನೇ ನಿಯಮದ ಕೆಳಗೆ ಬರುವ ವಿಷಯವನ್ನು ಹಾಕಿಕೊಂಡಿದ್ದೇವೆಂದು ತಿಳಿಸುತ್ತಿದರು.

MR. SPEAKER.—I think, you have a point. I will...

SRI K. LAKKAPPA.—Names of those who have sent questions call attention notices should be called on priority,

ಶ್ರೀ ಎಂ. ವಿ. ವೆಂಕಟಪ್ಪ.—ನಿನ್ನೆ ದಿವಸ ಉತ್ತರ ಕೊಡುವುದರಲ್ಲಿ ಒಂದು ರೀತಿ ಇದ್ದರೆ ಪ್ರಿಂಟಿಂಗ್‌ನಲ್ಲಿ ಒಂದು ರೀತಿ ಇತ್ತು. ಆರ್ಡರ್ ಆಗಿ ಅಂದರೆ ೧–೨–೩–೪–೫ ಈ ರೀತಿಯಲ್ಲಿ ಇರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮುಂದೆ ಉತ್ತರಗಳು ಬರುವ ಸಮಯವಾಗಿ ಬರುವಂತಿರಬೇಕೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ.